ದಿನಾಂಕಃ 08.12.2017

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು</u>

<u>ಪಾಟೀ ಸವಾಲು ಃ  ವಾದಿ ಪರ ವಕೀಲರಿಂದಃ</u>

ನನ್ನ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ಸ್ವಂತ ಊರು ಜಗಳೂರು ತಾ. ಗೌರಿಪುರ ಎಂದರೆ ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿ ಗೌಡಗೆರೆ ಗ್ರಾಮದವನು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಎಲ್ಲರೂ ಗೌಡಗೆರೆ ಗ್ರಾಮದವರು. ವಾದಿ ಮತ್ತು ಪ್ರತಿವಾದಿಗಳು ಬೇರೆ ಬೇರೆ ವಾಸವಿದ್ದಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ಜಮೀನುಗಳನ್ನು ಬೇರೆ ಬೇರೆಯಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಕೌಂಟರ್ ಕ್ಲೇಮ್ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ಹುಣಸೇ ಮರಗಳನ್ನು ವಾದಿ ಮತ್ತು ಪ್ರತಿವಾದಿಗಳು ಒಟ್ಟಿಗೆ ಹುಣಸೇಹಣ್ಣುಗಳನ್ನು ಕಿತ್ತುಕೊಳ್ಳುತ್ತಾರೆ. ಸಾಕ್ಷಿ ಹೇಳಲು ನಾನೇ ಬಂದಿರುತ್ತೇನೆ.

1 ನೇ ಪ್ರತಿವಾದಿಯ ಹೆಂಡತಿ ಜಯಲಕ್ಷ್ಮಮ್ಮ ನನಗೆ ಗೊತ್ತು. ಸದರಿಯವರು ನನಗೆ ಒಂದು ಕ್ವಿಂಟಲ್ ರಾಗಿಯನ್ನು ಸಾಕ್ಷಿ ಹೇಳುವ ಕಾರಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಗೌಡಗೆರೆ ಗ್ರಾಮದ ವಾಸಿಯಾಗದ ಕಾರಣ ವಾದಿ ಮತ್ತು ಪ್ರತಿವಾದಿಗಳ ಮನೆತನದ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಯಾರು ಯಾರು ಎಷ್ಟು ಜಮೀನುಗಳನ್ನು ಸ್ವಾಧೀನಾನುಭವ ಹೊಂದಿದ್ದಾರೆ ಎಂದು ಹೇಳಲಾಗುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ಗೌಡಗೆರೆಯಲ್ಲಿ ಸದರಿ ಕೇಸು ದಾಖಲಿಸುವ ಮುನ್ನ ಪಂಚಾಯಿತಿ ಮಾಡಿದ್ದೆವು. ಪಂಚಾಯಿತಿಯ ಕಾಲಕ್ಕೆ ಸಿದ್ದಪ್ಪ, ವಿರುಪಾಕ್ಷಪ್ಪ, ಗಂಟೆಪ್ಪ, ಸಣ್ಣರಂಗಪ್ಪ, ದೊಡ್ಡರಂಗಪ್ಪ, ಕುರುಬರ ಜಿನ್ನಿನ ರಂಗಪ್ಪ ಇದ್ದರು. ಪಂಚಾಯಿತಿಯು ಪಂಚಾಯಿತಿಯ ಕಟ್ಟೆಯಲ್ಲಿ ಬೆ.10-00 ರಿಂದ 12-00 ಅಥವಾ 1-00 ಗಂಟೆವರೆಗೆ ನಡೆಯಿತು.

ಪ್ರತಿವಾದಿ ಮೂರನೇ ಒಂದು ಭಾಗಂಶ ಕೇಳಿರುತ್ತಾರೆ. ಹುಣಸೇಮರಗಳನ್ನು ಜಂಟಿಯಾಗಿ ಅನುಭವಿಸಿಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ. ಸರಿಯಿದೆ,**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಳ್ಳಕೆರೆ.**